ಆ) ಈ ಸ್ಮಾರಕಗಳ ಸಂರಕ್ಷಣೆ ಮತ್ತು ಉಸ್ತುವಾರಿಗಾಗಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು ಯಾವುವು?

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ರಾಜ್ಯದಲ್ಲಿ ಸುಮಾರು 752 ರಾಜ್ಯ ಸಂರಕ್ಷಿತ ಸ್ಮಾರಕಗಳು ಇವೆ

ಆ) ಪಾರಂಪರಿಕ ಸ್ಮಾರಕಗಳ / ನಿವೇಶನಗಳನ್ನು ಪಟ್ಟಿ ಮಾಡುವ, ದಾಖಲೀಕರಣ ಮಾಡುವ ಹಾಗೂ ಇನ್‌ವೆಂಟರಿಯಿಂಗ್, ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್ ಮುಂತಾದ ಕಾರ್ಯಗಳನ್ನು ಪರಂಪರೆ ಇಲಾಖೆಗೆ ಲಭ್ಯವಾಗಿರುವ ಸೀಮಿತ ಅನುದಾನದಲ್ಲಿ ನಡೆಸಲಾಗುತ್ತಿದೆ 12ನೇ ಆರ್ಥಿಕ ಅನುದಾನದ ಅಡಿಯಲ್ಲಿ ಲಭ್ಯವಾಗಿರುವ ಹಣದಲ್ಲಿ ಹಾಗೂ ಭಾರತ ಸರ್ಕಾರದ ಜೆ ಎನ್ ಎನ್ ಯು ಆರ್ ಎಮ್ ಯೋಜನೆಯಡಿ ಸ್ಮಾರಕಗಳ ಸಂರಕ್ಷಣೆ ಹಾಗೂ ನಿರ್ವಹಣೆಯನ್ನು ಮಾಡಲಾಗುತ್ತಿದೆ

ರಾಜ್ಯ ಸಂರಕ್ಷಿತ ಸ್ಮಾರಕಗಳ ಸಂರಕ್ಷಣೆ ಹಾಗೂ ನಿರ್ವಹಣೆಯು ರಾಜ್ಯ ಪುರತತ್ವ ಇಲಾಖೆಯ ಜವಾಬ್ದಾರಿಯಾಗಿದ್ದು ಈ ಕಾರ್ಯವನ್ನು ನಿರ್ದೇಶನಾಲಯಕ್ಕೆ ಲಭ್ಯವಾಗಿರುವ ಯೋಜನೆ, ಯೋಜನೇತರ ಹಾಗೂ 12ನೇ ಆರ್ಥಿಕ ಅನುದಾನದ ಅಡಿಯಲ್ಲಿ ನಿರ್ವಹಿಸಲಾಗುತ್ತಿದೆ

889(738) ಶ್ರೀ ಕೃಷ್ಣವಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಒಟ್ಟು ಸ್ತ್ರೀಶಕ್ತಿ ತಂಡಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು),

ಆ) ಅವುಗಳಿಗೆ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ನೀಡಿದ ಆರ್ಥಿಕ ನೆರವು ಎಷ್ಟು,

ಇ) 2006-07ನೇ ಸಾಲಿನಲ್ಲಿ ಎಷ್ಟು ಸ್ತ್ರೀಶಕ್ತಿ ತಂಡಗಳನ್ನು ಸೃಷ್ಟಿಸಲು ಸರ್ಕಾರ ಯೋಜನೆ ರೂಪಿಸಿದೆಯೇ,

ಈ) ಹೆಚ್ಚುವರಿ ತಂಡಗಳ ರಚನೆಗಾಗಿ ಸರ್ಕಾರ ಮೀಸಲಿಟ್ಟ ಮತ್ತು ಬಿಡುಗಡೆ ಮಾಡಿದ ಹಣದ ಮೊತ್ತ ಎಷ್ಟು,

ಉ) ಸ್ತ್ರೀಶಕ್ತಿ ತಂಡಗಳು ತಯಾರಿಸಿದ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆಗಾಗಿ ಜಿಲ್ಲಾ ಮಾರುಕಟ್ಟೆ ಕೇಂದ್ರ ಸ್ಥಾಪನೆಗೆ ಸರ್ಕಾರ ಕೈಗೊಂಡ ಕ್ರಿಯಾ ಯೋಜನೆಗಳು ಯಾವುವು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ 1,19,246 ಗ್ರಾಮಾಂತರ ಸ್ತ್ರೀಶಕ್ತಿ ಗುಂಮಗಳನ್ನು, 6252, ನಗರ ಸ್ತ್ರೀಶಕ್ತಿ ಗುಂಮಗಳನ್ನು ರಚಿಸಲಾಗಿರುತ್ತದೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಅವುಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ರೂ 27 39 ಕೋಟಿ ಮತ್ತು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ರೂ 2 15 ಕೋಟಿ ಆರ್ಥಿಕ ನೆರವನ್ನು ನೀಡಲಾಗಿದೆ

ಇ) 2006–07ನೇ ಸಾಲಿನಲ್ಲಿ 20,000 ಗ್ರಾಮಾಂತರ ಸ್ತ್ರೀಶಕ್ತಿ ಗುಂಪುಗಳನ್ನು ಹಾಗೂ 5000 ನಗರ ಸ್ತ್ರೀಶಕ್ತಿ ಗುಂಮಗಳನ್ನು ರಚಿಸಲು ಸರ್ಕಾರ ಯೋಜನೆ ರೂಪಿಸಿ ಮಂಜೂರು ಮಾಡಿರುತ್ತದೆ

ಈ) ಹೆಚ್ಚುವರಿ ಸ್ತ್ರೀಶಕ್ತಿ ಗುಂಪುಗಳ ರಚನೆಗಾಗಿ ರೂ 908 48 ಲಕ್ಷಗಳನ್ನು ಮೀಸಲಿಟ್ಟು ರೂ 433 32 ಲಕ್ಷಗಳನ್ನು ಇಲ್ಲಿಯವರೆಗೆ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ

ಉ) ಸ್ತ್ರೀಶಕ್ತಿ ಗುಂಮಗಳು ತಯಾರಿಸಿದ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆಗಾಗಿ ಸರ್ಕಾರ ಜಿಲ್ಲೆಗೊಂದರಂತೆ ಮಾರುಕಟ್ಟೆ ಸಂಕೀರ್ಣವನ್ನು ನಿರ್ಮಾಣ ಮಾಡಲು ದಿನಾಂಕ 1–8–2006ರಲ್ಲಿ ಆದೇಶ ಹೊರಡಿಸಿದೆ ಒಂದು ಮಾರುಕಟ್ಟೆ ಸಂಕೀರ್ಣಕ್ಕೆ ರಾಜ್ಯ ಸರ್ಕಾರದ ವತಿಯಿಂದ ರೂ 2 03 ಲಕ್ಷಗಳಂತೆ ಅನುದಾನ ನೀಡಲು ಒಟ್ಟು ರೂ 55 00 ಲಕ್ಷ ಆಯವ್ಯಯದಲ್ಲಿ ನಿಗದಿವಡಿಸಲಾಗಿದೆ ಜೊತೆಗೆ ಎಸ್ ಜಿ ಎನ್ ವೈ ಶಾಸಕರ ಹಾಗೂ ಸಂಸದರ ವ್ರಾದೇಶಿಕ ಅಭಿವೃದ್ಧಿ ನಿಧಿಯಿಂದಲೂ ವಂತಿಕೆಯನ್ನು ಪಡೆದು, ಈ ಕಾರ್ಯಕ್ರಮವನ್ನು ವರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಪ್ರಯತ್ನ ಮ್ಮಾಡಲಾಗುತ್ತಿದೆ

ಸ್ತ್ರೀಶಕ್ತಿ ಯೋಜನೆಯಡಿ ರಚಿಸಲಾದ ಸ್ವಸಹಾಯ ಗುಂಪುಗಳ ಜಿಲ್ಲಾವಾರು ಮಾಹಿತಿ

ಕ್ರ ಸಂ	ಜಿಲ್ಲೆಗಳ ಹೆಸರು	ರಚನೆಯಾಗಿರುವ ಸ್ವಸಹಾಯ ಗುಂಮಗಳ ಸಂಖ್ಯೆ
1	ಬೆಂಗಳೂರು (ನ)	2312
2	ಬೆಂಗಳೂರು (ಗ್ರಾ)	165
3	ಬಿಜಾಮರ	138

4	ಬಳ್ಳಾರಿ	267
5	ಬೆಳಗಾಂ	494
6	ಬೀದರ್	100
7	ಬಾಗಲಕೋಟೆ	111
8	ಚಿಕ್ಕಮಗಳೂರು	100
9	ಚಾಮರಾಜನಗರ	50
10	ಚಿತ್ರದುರ್ಗ -	97
11	ದಾವಣಗೆರೆ	166
12	ಧಾರವಾಡ	250
13	ಗುಲ್ಬರ್ಗಾ	245
14	ಗದಗ್	89
15	ಹಾಸನ	116
16	ಹಾವೇರಿ	87
17	ಕೋಲಾರ	163
18	ಉತ್ತರ ಕನ್ನಡ	142
19	ಕೊಪ್ಪಳ	90
20	ಮೈಸೂರು	223
21	ದಕ್ಷಿಣ ಕನ್ನಡ	193
22	ಮಂಡ್ಯ	98
23	ಕೊಡಗು	23
24	ರಾಯಚೂರು	123
25	ಶಿವಮೊಗ್ಗ	202
26	ತುಮಕೂರು	155
27	ಉಡುಪಿ	53
	ಒಟ್ಟು	**6252**

ಅನುಬಂಧ

ಗ್ರಾಮೀಣ ಸ್ತ್ರೀಶಕ್ತಿ ಯೋಜನೆಯಡಿ ರಚಿಸಲಾದ ಸ್ವಸಹಾಯ ಗುಂಪುಗಳ ಜಿಲ್ಲಾವಾರು ಮಾಹಿತಿ

ಕ್ರ ಸಂ	ಜಿಲ್ಲೆಗಳ ಹೆಸರು	ರಚನೆಯಾಗಿರುವ ಸ್ವಸಹಾಯ ಗುಂಮಗಳ ಸಂಖ್ಯೆ
1	ಬೆಂಗಳೂರು (ನ)	2768
2	ಬೆಂಗಳೂರು (ಗ್ರಾ)	6790
3	ಬಾಗಲಕೋಟೆ	3501
4	ಬೆಳಗಾಂ	12120
5	ಬಳ್ಳಾರಿ	4200
6	ಬೀದರ್	2479
7	ಬಿಜಾಪುರ	3508
8	ಚಾಮರಾಜನಗರ	3491
9	ಚಿಕ್ಕಮಗಳೂರು	2818
10	ಚಿತ್ರದುರ್ಗ	4350
11	ದಾವಣಗೆರೆ	4030
12	ಧಾರವಾಡ	2497
13	ಗದಗ್	2674
14	ಗುಲ್ಬರ್ಗಾ	7800
15	ಹಾಸನ	5392
16	ಹಾವೇರಿ	4029
17	ಉತ್ತರ ಕನ್ನಡ	1582
18	ಕೋಳಾರ	7800
19	ಕೊಪ್ಪಳ	2400
20	ಕೊಡಗು	778
21	ಮಂಡ್ಯ	5736
22	ದಕ್ಷಿಣ ಕನ್ನಡ	3604
23	ಮೈಸೂರು	5680
24	ರಾಯಚೂರು	4320

25	ಶಿವಮೊಗ್ಗ	3586
26	ತುಮಕೂರು	8678
27	ಉಡುಪಿ	2640
	ಒಟ್ಟು	**119246**

890(1032) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ, ಜಯನಗರ ಹಾಗೂ ಶಾಂತಿನಗರ ಗೃಹ ನಿರ್ಮಾಣ ಸಂಘ, ಲಾಂಗ್‌ಫೋರ್ಡ್ ರಸ್ತೆ, ಇದರಲ್ಲಿ ನೈಜವಾದ ಸಂಘ ಯಾವುದು,

ಆ) ಸಂಘಕ್ಕೆ ಆಡಿಟ್ ವರದಿಗಳಲ್ಲಿ ಸಂಘದ ನೋಂದಣಿ ಸಂಖ್ಯೆಯನ್ನು ಉದ್ದೇಶ ಪೂರ್ವಕವಾಗಿ ಬದಲಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಒಂದು ಸಹಕಾರ ಸಂಘವನ್ನು ಖರೀದಿ ಮಾಡಲು ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಅವಕಾಶವಿದೆಯೇ,

ಈ) ಹಾಗಿದ್ದಲ್ಲಿ ಕರ್ನಾಟಕ ರಾಜ್ಯದಲ್ಲಿ ಖರೀದಿಸಲ್ಪಟ್ಟ ಸಹಕಾರ ಸಂಘಗಳು ಯಾವುವು?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಲಾಂಗ್‌ಫೋರ್ಡ್ ರಸ್ತೆ, ಶಾಂತಿನಗರ, ಬೆಂಗಳೂರು, ಇದನ್ನು ಸಹಕಾರ ಇಲಾಖೆಯ ನೈಜವಾದ ಸಂಘವೆಂದು ಪರಿಗಣಿಸಿದೆ ಈ ಬಗ್ಗೆ ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ ಜಯನಗರ ಇದರ ಕಾರ್ಯನಿರ್ವಾಹಕ ನಿರ್ದೇಶಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹೂಡಿದ್ದು, ಮಾನ್ಯ ನ್ಯಾಯಾಲಯದಿಂದ ಹನ್ನೆರಡು ವಾರಗಳ ತಡೆಯಾಜ್ಞೆಯನ್ನು ಪಡೆದಿರುತ್ತದೆ

ಆ) ಬಂದಿದೆ

ಇ) ಯಾವುದೇ ಸಹಕಾರ ಸಂಘವನ್ನು ಖರೀದಿಸಲು ಕರ್ನಾಟಕ ಸಹಕಾರ ಸಂಘಗಳ ಅದಿನಿಯಮ ಹಾಗೂ ನಿಯಮಗಳಲ್ಲಿ ಅವಕಾಶವಿಲ್ಲ

ಈ) ಗಮನಕ್ಕೆ ಬಂದಿಲ್ಲ